# ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೆಚ್.ಡಿ.ಕೋಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೆಚ್.ಡಿ.ಕೋಟೆ**

## ಸಿ. ಸಿ. ನಂ. 361/2024

ಪಿರ್ಯಾದಿ : ಶ್ರೀ.ಎಸ್.ನಾಗರಾಜು ಬಿನ್ ಲೇಟ್.ಚನ್ನಯ್ಯ
ವಯಸ್ಸು 49 ವರ್ಷ,
ವಾಸಃ ಶೀರನಹುಂಡಿ ಗ್ರಾಮ, ಕಸಬಾ ಹೋಬಳಿ,
ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

(ಶ್ರೀ.ಎಸ್.ಕೆ.ಎಸ್., ವಕೀಲರು)

**ವಿರುದ್ಧ**

ಆರೋಪಿ : ಶ್ರೀ.ನಾಗೇಗೌಡ ಬಿನ್ ಲೇಟ್.ಹುಚ್ಚೇಗೌಡ
ವಯಸ್ಸು 48 ವರ್ಷ,
ವಾಸಃ ಶಾಂತಿಪುರ(ಹೆಬ್ಬಳ್ಳ) ಗ್ರಾಮ,
ಕಸಬಾ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.
(ಶ್ರೀ.ಎಂ.ಎಸ್.ಆರ್ ., ವಕೀಲರು)

### ::ಆಪಾದನೆಯ ಸಾರಾಂಶ::

ಆರೋಪಿಯಾದ ನೀವು ಪಿರ್ಯಾದಿದಾರರಿಗೆ ಹಲವು ವರ್ಷಗಳಿಂದ ಪರಿಚಯಸ್ಥರಾಗಿದ್ದು, ಪಿರ್ಯಾದಿಯವರಿಂದ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತವಾಗಿ ಅಂದರೆ ಕಾನೂನು ಬದ್ಧ ಅವಶ್ಯಕತೆಗಳಿಗಾಗಿ ಹಾಗೂ ಕೈ ಸಾಲ ತೀರಿಸಲು ಮತ್ತು ಕುಟುಂಬದ ಅವಶ್ಯಕತೆಗಾಗಿ ಒಟ್ಟು ರೂ.2,50,000/- ಹಣವನ್ನು ಕೈ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲವನ್ನು ತೀರಿಸುವ ಸಲುವಾಗಿ ಆರೋಪಿಯಾದ ನೀವು ನಿಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ ಸಂಖ್ಯೆ : 910030, ದಿನಾಂಕ: 25.04.2024 ರಂದು ರೂ.2,50,000/- ವನ್ನು ನಮೂದಿಸಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹೆಚ್.ಡಿ.ಕೋಟೆ ಶಾಖೆಯ ಚೆಕ್ ಅನ್ನು ನೀಡಿದ್ದು, ಪಿರ್ಯಾದಿಯವರು ಸದರಿ ಚೆಕ್ ಅನ್ನು ನಗದೀಕರಿಸುವ

ಸಲುವಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್, ಹೆಚ್.ಡಿ.ಕೋಟೆ ಶಾಖೆಯ ಮೂಲಕ ದಿನಾಂಕ:25.04.2024 ರಂದು ಸಲ್ಲಿಸಿದಾಗ, ಸದರಿ ಚೆಕ್ "**Funds Insufficient**" ಎಂಬ ಕಾರಣ ನಮೂದಿಸಿ ದಿನಾಂಕಃ 09.05.2024 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿಸಿರುತ್ತಾರೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ ವಕೀಲರಿಂದ ದಿನಾಂಕಃ 17.05.2024 ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್‌ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

-ಸಹಿ/-

ದಿನಾಂಕಃ 30.06.2025

(ಸಂತೋಷ ಕೊಠಾರಿ )
ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,
ಹೆಚ್.ಡಿ.ಕೋಟೆ.